ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.
ದಿನಾಂಕ: 12.01.2024

**ಸಂಖ್ಯೆ:ಕಾಶಿಇ/ಶೈವಿ/218/ಸ್ಕೌಟ್-ಗೈಡ್ಸ್/2020-21**

## ಸುತ್ತೋಲೆ

**ವಿಷಯ:** ರಾಜ್ಯದ ಎಲ್ಲಾ ಪದವಿ ಕಾಲೇಜುಗಳಲ್ಲಿ ರೋವರಿಂಗ್ – ರೇಂಜರಿಂಗ್‌ಗೆ ಸಂಬಂಧಪಟ್ಟ ಪುಸ್ತಕ ಮತ್ತು ಇತರೆ ಸಾಮಗ್ರಿಗಳನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಾಮಗ್ರಿ ಮಳಿಗೆಯಿಂದ ಖರೀದಿಸಲು ಅನುಮತಿ ನೀಡುವ ಕುರಿತು.

**ಉಲ್ಲೇಖ:** ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಂಗಳೂರು, ರವರ ಪತ್ರ ಸಂಖ್ಯೆ:ಎಸ್‌ಹೆಚ್‌ಕ್ಯೂ/ತ.1/2023-24 ದಿನಾಂಕ:08.11.2023.

********

ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ಇವರ ಅಂದೋಲನವು ಯುವ ಜನಾಂಗದಲ್ಲಿ ಶಿಸ್ತು ಮತ್ತು ಸೇವಾ ಮನೋಭಾವವನ್ನು ಪಾಲಿಸುವಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಹಿನ್ನಲೆಯಲ್ಲಿ ಈ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ದಿ ಭಾರತ್ ಸ್ಕೌಟ್ಸ್ & ಗೈಡ್ಸ್‌ನ ರೋವರ್ & ರೇಂಜರ್ ಘಟಕಗಳನ್ನು ಪ್ರಾರಂಭಿಸುವುದು ಕಡ್ಡಾಯವಾಗಿದ್ದು, ವಿದ್ಯಾರ್ಥಿಗಳಿಗೆ ಪ್ರಗತಿಪರ ತರಬೇತಿಗಳು, ಸಮುದಾಯ ಸೇವಾ ಕಾರ್ಯಕ್ರಮಗಳು, ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿ ಚಟುವಟಿಕೆಗಳು, ವಿಪತ್ತು ನಿರ್ವಹಣೆ, ಸಾಹಸಮಯ ಚಟುವಟಿಕೆಗಳ ಬಗ್ಗೆ ಪ್ರೋತ್ಸಾಹಿಸಿ, ಅವರುಗಳು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುವುದು ರೋವರ್ ಸ್ಕೌಟ್ ಲೀಡರ್, ರೇಂಜರ್ ಲೀಡರ್ ರವರ ಜವಾಬ್ದಾರಿಯಾಗಿರುತ್ತದೆ.

ಈ ನಿಟ್ಟಿನಲ್ಲಿ ಪ್ರಗತಿಪರ ಶಿಕ್ಷಣಕ್ಕೆ ಮತ್ತು ವಿದ್ಯಾರ್ಥಿಗಳಿಗೆ ನೀಡಬೇಕಾದ ಅವಶ್ಯಕ ಮಾಹಿತಿಗಳ ಬಗ್ಗೆ ಪುಸ್ತಕಗಳು ಹಾಗೂ ಸಾಮಗ್ರಿಗಳು ಅತೀ ಅವಶ್ಯಕವಾಗಿದ್ದು, ಇವುಗಳನ್ನು ಖರೀದಿಸಲು (ಆನ್‌ಲೈನ್ ಅಥವಾ ನೇರವಾಗಿ) ಹಾಗೂ ಅದರ ಖರ್ಚನ್ನು ಭರಿಸಲು ಆಯಾಯ ಪದವಿ ಕಾಲೇಜುಗಳ ರೋವರ್ ರೇಂಜರ್ ಚಾಲ್ತಿ ಮತ್ತು ಸಂಚಿತ ನಿಧಿಯಿಂದ ಭರಿಸಲು ಹಾಗೂ ಖರೀದಿಸಿದ ಪುಸ್ತಕಗಳು ಹಾಗೂ ಸಾಮಗ್ರಿಗಳನ್ನು ಆಯಾ ಕಾಲೇಜಿನ ಗ್ರಂಥಾಲಯದಲ್ಲಿ ಇಟ್ಟು ವಿದ್ಯಾರ್ಥಿಗಳ ಪರಾಮರ್ಶನೆಗಾಗಿ / ಉಪಯೋಗಿಸಲು ಅನುವು ಮಾಡಿಕೊಡುವಂತೆ ಸೂಚಿಸಲಾಗಿದೆ.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ**

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಈ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

ಪ್ರತಿಯನ್ನು:

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ರಾಜ್ಯ ಕಾರ್ಯದರ್ಶಿ, ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, "ಶಾಂತಿ ಗೃಹ", ನಂ.39, ಅರಮನೆ ರಸ್ತೆ, ಬೆಂಗಳೂರು-01.
3. ಆಯುಕ್ತರ, ನಿರ್ದೇಶಕರ, ಹೆಚ್ಚುವರಿ ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
4. ಕಛೇರಿ ಪ್ರತಿ.